'ಏ ಮಗನೇ, ಜೆಸಿಬಿಯವರಿಗೆ ಹೇಳೋ... ಬೇಗ...' ಎಂದವರೇ ಪ್ಯಾಂಟೇರಿಸಿಕೊಂಡು, ಕಾಫಿ ಕೊಡಲು ಬಂದ ಹೆಂಡತಿಯನ್ನು ಪಕ್ಕಕ್ಕೆ ದೂಕಿ, ಕಾರನ್ನೇರಿ ಹೊರಟರು.

ತಕ್ಷಣ ಬಂದ ಕಾರಣ, ಹೆಚ್ಚೇನೂ ಅನಾಹುತ ನಡೆದಿರಲಿಲ್ಲ.

'ಇರ್ರಿ, ನಾನೇ ಜೆಸಿಬಿ ತರ್ತಿದ್ದೀನಿ' ಅಂತ ಕೂಗಿದರು.

'ಲೇಟಾಯ್ತು ಸರ್... ನಮ್ಮುಡಗ್ರು ಕಾಂಪೌಂಡ್ ಹಾಕೋಕೆ ಅಂತ ಎರಡ ದಿನ ಬಂದು ವಾಪಸ್ ಹೋಗಿದ್ದಾರೆ. ಅದಕ್ಕೆ ಐದು ಸಾವಿರ ಚಾರ್ಜ್ ಮಾಡಿದ್ದಾರೆ. ಜೆಸಿಬಿಯವರು ಮೂರು ಗಂಟೆ ಕೆಲಸ ಅಂದಿದಾರೆ. ಮೂರು ಸಾವಿರವಂತೆ. ನಾವು ಕಮ್ಮಿಟ್ಟಾದ ಮೇಲೆ ನಿಲ್ಸೋ ಮಾತೇ ಇಲ್ಲ' ಅಂತ ಗೀತಾ ಖಡಕ್ಕಾಗಿ ಹೇಳಿದಳು.

'ಅಯ್ಯೋ ಮಾತಾಡೋಣ ಇರಿ. ಅವನಿಗೆ ಎಂಜಿನ್ ಆಫ್ ಮಾಡೋಕೇಳಿ' ಅಂತ ಸರ್ಕಾರ್ ಗೋಗರೆದರು.

'ನಮಗೆ ಒಂದ್ವಾರ ತೊಂದರೆ ಕೊಟ್ಟಿದ್ದೀರ, ಪೊಲೀಸ್ ಕರ್ಸೀ ಹೆದರ್ಸೋಕೆ ಪ್ರಯತ್ನಿಸಿದ್ದೀರ. ನಮ್ಗೂ ಖರ್ಚಾಗಿದೆ. ಅದೆಷ್ಟು ಪತ್ರಿಕೆ, ಚಾನೆಲ್ನವರ ಬಾಯಿ ಮುಚ್ಚಿಸ್ತೀರ ನೋಡಾಣ. ನಿಮ್ಗೆ ಯಾವ್ದು ಸುಲಭಾನೋ ಆಯ್ಕೊಳಿ'.

'ಆಯ್ತು ತಾಯಿ... ನಮ್ದೇ ತಪ್ಪಾಯ್ತು... ಕೊಡ್ತೀನಿ ಬಿಡಿ' ಅಂತ ಸರ್ಕಾರ್ ಅಂದಾಗಲೇ ಗೀತಾ ಡ್ರೈವರ್‌ಗೆ ಸನ್ನೆ ಮಾಡಿದ್ದು. ಸರ್ಕಾರ್ ಬೆವರೊರೆಸಿಕೊಂಡು ಹಾಗೆ ಪಕ್ಕಕ್ಕೆ ತಿರುಗಿದಾಗ ಮೂರ್ತಿ ತನ್ನ ಫೋನಿನಲ್ಲಿ ಇದನ್ನೆಲ್ಲ ವಿಡಿಯೊ ಮಾಡುತ್ತ ನಿಂತಿದ್ದ.

ಫೋಟೊ ತುಣುಕುಗಳನ್ನೆಲ್ಲ ಜೋಡಿಸಿ, ಅದಕ್ಕೆ ಧ್ವನಿ ಸೇರಿಸಿ, ಶೀರ್ಷಿಕೆ ನೀಡಿ ವಿಡಿಯೊ ಮಾಡಬಲ್ಲ ಹೆಂಡತಿಯ ಕೌಶಲ ನೋಡಿ ಅವನಿಗೆ ಅವತ್ತು ಬೆಳಗ್ಗೆ ಪುಳಕವಾಗಿತ್ತು. ಅದೇ ಹುರುಪಿನಲ್ಲಿ ಅವಳು ಹೇಳಿದಂತೆ ವಿಡಿಯೊ ಮಾಡಲು ನಿಂತಿದ್ದ.

ಸರ್ಕಾರ್ ಮುಖ ಮುಚ್ಚಿ ಕೈ ಅಡ್ಡ ಹಿಡಿದರು. ಮೂರ್ತಿ ಫೋನ್ ಕೆಳಗಿಳಿಸಿದ.

ಸರ್ಕಾರ್ ಜೇಬಿಂದ ಹತ್ತು ಸಾವಿರ ತೆಗೆದು ಕೊಟ್ಟರು. ಅಷ್ಟರಲ್ಲಿ ಜೂನಿಯರ್ ಜೆಸಿಬಿ ತಗೊಂಡು ಬಂದ. ಮುಂದಿನ ಐದು ಗಂಟೆಗಳಲ್ಲಿ ಸೈಟು ಖಾಲಿಯಾಯಿತು. ಮೂರ್ತಿಯ ಸೈಟಿನೆಡೆ ಚಾಚಿಕೊಂಡಿದ್ದ ಸಜ್ಜಾಗಳು ಹಿಂದಕ್ಕೆ ಸರಿದವು. ಇತ್ತ ಕಾಂಪೌಂಡಿನ ಗೋಡೆಯ ಕೆಲಸವೂ ಶುರುವಾಯಿತು. ಅಷ್ಟೂ ಹೊತ್ತು ಕರೆಸಿದ ಜೆಸಿಬಿಯನ್ನು ಗೀತಾ ಹಿಂದಕ್ಕೆ ಕಳಿಸದೆ ಕಾಯಿಸಿದಳು. ಶ್ರಮವಿಲ್ಲದೆ ಸುಮ್ಮನೆ ನಿಂತು ಹೋದದ್ದಕ್ಕೆ ದುಡ್ಡು ಬರ್ತಿದ್ದ ಕಾರಣ ಗೀತಾ ಕರೆಸಿದ ಜೆಸಿಬಿಯವನು ಖುಷಿಯಾಗಿ ಕಾದು ಹಣಪಡೆದು ಹೋದ. ಸರ್ಕಾರ್ ತನ್ನ ಜೆಸಿಬಿಯವನ ಕಡೆಯಿಂದಲೇ ಪೂರ್ತಿ ಕೆಲಸ ಮಾಡಿಸಿಕೊಂಡರು.

ತಾನು ಮಗನಿಗಿಂತಲೂ ಹೆಚ್ಚು ಪ್ರೀತಿಸುತ್ತಿದ್ದ ಎಂ. ಸ್ಯಾಂಡಿನ ರಾಶಿಯನ್ನು ಅವರದೇ ಜಾಗಕ್ಕೆ ಹಾಕಿಸಿಕೊಂಡ ಮೇಲಷ್ಟೆ ಸರ್ಕಾರ್‌ಗೆ ಹೊಟ್ಟೆ ಹಸಿವಾಗಿ ಚುರಕ್ಕೆಂದಿದ್ದು. ಅಸಲು ಅದೊಂದಕ್ಕೆ ಮಾತ್ರವೇ ಅವರು ಹಣ ಕೊಟ್ಟಿದ್ದುದು. ಹಾಗಾಗಿ ಅವರ ಕರುಳು ಚುರುಕ್ ಎಂದಿತ್ತು. ಬಡಪಾಯಿ ಗಂಡಸು, ಜೊತೆಗೊಂದು ಹೆಣ್ಣು ಹೆಂಗಸು ಎಂದು ಎಣಿಸಿ ಅವನು ಆಡಲು ಹೋದ ಆಟ ಅವನಿಗೇ ಎದಿರೇಟು ನೀಡಿತ್ತು. ಆದರೆ, ಜೂನಿಯರ್ ಸರ್ಕಾರ್‌ಗೆ ತನ್ನ ಕುಹಕ ಮಣ್ಣು ಮುಕ್ಕಿದ್ದು ಸುತಾರಾಂ ಇಷ್ಟವಾಗಲಿಲ್ಲ.

'ಸೊಕ್ಕು ಆಯಮ್ಮಂಗೆ... ಬ್ಲಾಕ್ ಮೇಲ್ ಮಾಡ್ತಿದ್ದಾಳೆ' ಎಂದು ಅವನು ಬುಸುಗುಟ್ಟಿದ.

'ಯಾರೋ ನೀನು ಹಂಗನ್ನಕ್ಕೆ? ನೀನೇನು ಈ ಸೈಟಿನ ಓನರ್ರಾ?' ಅಂದ ಸರ್ಕಾರ್ ತನ್ನ ಉರಿಯನ್ನೆಲ್ಲ ಮಗನ ಮೇಲೆ ಕಕ್ಕಿದ್ದರು. ತಮ್ಮ ಮಗ ಇತರ ಮಕ್ಕಳಂತೆ ಚೆನ್ನಾಗಿ ಓದದೆ ಬರೇ ಕಾಂಟ್ರಾಕ್ಟರ್ ತರಹ ಅಪ್ಪನ ನೆರಳಿನಲ್ಲಿ ಉಂಡಾಡಿ ಗುಂಡನಂತೆ ಓಡಾಡಿಕೊಂಡಿದ್ದುದಕ್ಕೆ ಅವರಿಗೆ ಮಗನ ಮೇಲೆ ಒಳಗೇ ಬೇಸರವಿತ್ತು.

ಅಪ್ಪನ ಅವ್ಯವಹಾರದಲ್ಲಿ ಬೆಂಬಲಕ್ಕೆ ಬಂದು ಅವನಿಂದ ಭೇಷ್ ಗಿರಿ ಪಡೆಯಬಯಸಿದ್ದ ಜೂನಿಯರ್‌ಗೆ ಅಪ್ಪನ ಕಮೆಂಟಿನಿಂದ ಬಹಳ ಉರಿಯಿತು. ಅದೇ ಉರಿಯಲ್ಲಿ 'ಮಾಡ್ಕೋ ಹಂಗಾರೆ, ನನ್ನನ್ನು ಇನ್ನು ಯಾವತ್ತಾದ್ರೂ ಈ ಸೈಟಿನವರ ವಿಚಾರದಲ್ಲಿ ಮಾತಾಡು ಅಂದ್ರೆ ನೋಡು' ಅಂತ ರೇಗಿ ಸರಕ್ಕನೆ ಅಲ್ಲಿಂದ ಕಾಲ್ಕಿತ್ತು ಬಿಟ್ಟ.

'ತಥ್... ಈ ಹಿಂದಲ ಸೈಟಿನವರ ವಾಸ್ತುನೇ ಸರಿಯಾಗಿಲ್ಲ' ಎಂದು ಗೊಣಗಿಕೊಂಡ ಸರ್ಕಾರ್, ಹುಳಿ ಮನಸ್ಸಿನಲ್ಲೇ ಸಮಾಧಾನಪಟ್ಟುಕೊಂಡರು.

●